		ಶೇ.50 ರಷ್ಟು ಕೊಯ್ಲೋತ್ತರ ಮತ್ತು ಇತರೆ ಮಾರುಕಟ್ಟೆ ಮೂಲಭೂತ ಸೌಕರ್ಯಗಳಿಗೆ ಶೇ.40 ರಷ್ಟು ಸಹಾಯಧನ ಹಾಗೂ ತರಕಾರಿ ಬೆಳೆಗಾರರ ಸಂಘಗಳ ನೊಂದಣಿ ಮಾಡಿಸುವುದರ ಮೂಲಕ ತರಕಾರಿ ಉತ್ಪನ್ನಗಳಿಗೆ ನೇರ ಮಾರುಕಟ್ಟೆ ಅವಕಾಶ ಕಲ್ಪಿಸುವುದು. ಬೆಳೆ ಕಟಾವು ನಂತರದ ತಾಂತ್ರಿಕತೆ ಬಗ್ಗೆ ತರಬೇತಿ ಒದಗಿಸುವುದರಿಂದ ತರಕಾರಿ ಉತ್ಪನ್ನಗಳ ಕೊಯ್ಲೋತ್ತರ ನಷ್ಟ ಕಡಿಮೆ ಯಾಗುವುದು. ಇದರಿಂದಾಗಿ ರೈತರ ಜೀವನ ಮಟ್ಟ ಸುಧಾರಿಸುವುದು.
5	ತಾಳೆಬೆಳೆ ಪ್ರದೇಶ ವಿಸ್ತರಣೆ	ತಾಳೆ ಬೆಳೆಗಾರರಿಗೆ ನೀರಾವರಿ ವ್ಯವಸ್ಥೆ, ಕಟಾವಿನ ಸಲಕರಣೆಗಳಿಗೆ, ಸಸ್ಯ ಸಾಮಗ್ರಿ ಹಾಗೂ ಇತರೆ ಬೇಸಾಯ ವೆಚ್ಚಗಳಿಗೆ ಶೇ.50 ರಷ್ಟು ಸಹಾಯಧನ ಒದಗಿಸುವುದರಿಂದ ಉತ್ಪಾದನೆಗೆ ತಗಲುವ ವೆಚ್ಚ ಕಡಿಮೆಯಾಗುವುದಲ್ಲದೆ ತಾಳೆಬೆಳೆಯ ಉತ್ಪಾದನೆ ಮತ್ತು ಉತ್ಪಾದಕತೆಯಲ್ಲಿ ಹೆಚ್ಚಳ.

ರಸ್ತೆ ನಿರ್ವಹಣೆಗಾಗಿ ಮಾಡಿದ ವೆಚ್ಚ

248 (616) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ) :– ಮಾನ್ಯ ಲೋಕೋಪಯೋಗಿ ಇಲಾಖಾ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಕಳೆದ ಮೂರು ವರ್ಷಗಳ ಅವಧಿಯಲ್ಲಿ ಭಾಲ್ಕಿ ವಿಧಾನ ಸಭಾ ಕ್ಷೇತ್ರಕ್ಕೆ ಪ್ರತಿ ವರ್ಷ ರಸ್ತೆಗಳ ದುರಸ್ಥಿ ನಿರ್ವಹಣೆಗಾಗಿ ಬಿಡುಗಡೆ ಮಾಡಲಾದ ಹಣವೆಷ್ಟು; ಈ ಹಣದಿಂದ ಈ ಕ್ಷೇತ್ರದ ಎಷ್ಟು ಕಿ.ಮಿ. ರಸ್ತೆಗಳನ್ನು ದುರಸ್ಥಿ ಮತ್ತು ನಿರ್ವಹಣೆ ಮಾಡಲಾಗಿದೆ;

ಆ) ಮೇಲ್ಕಂಡ ಅವಧಿಯಲ್ಲಿ ಹೆಚ್ಚಿನ ಮೊತ್ತದ ಹಣ ಬಿಡುಗಡೆಯಾಗಿದ್ದರೂ ಸಹ ಈ ಕ್ಷೇತ್ರದ ರಸ್ತೆಗಳು ಸರಿಯಾಗಿ ದುರಸ್ಥಿಯಾಗದೆ ಹದಗೆಟ್ಟಿರುವುದು ನಿಜವಲ್ಲವೇ;

ಇ) ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು ಇದಕ್ಕೆ ಕಾರಣ ಕರ್ತರಾದವರ ಮೇಲೆ ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳುವುದು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಇಲಾಖಾ ಸಚಿವರು):

ಅ) ಕಳೆದ ಮೂರು ವರ್ಷಗಳ ಅವಧಿಯಲ್ಲಿ ಭಾಲ್ಕಿ ವಿಧಾನ ಸಭಾ ಕ್ಷೇತ್ರಕ್ಕೆ ರಸ್ತೆಗಳ ದುರಸ್ತಿ/ನಿರ್ವಹಣೆಗಾಗಿ ಬಿಡುಗಡೆ ಮಾಡಲಾದ ಹಣ, ದುರಸ್ತಿ ಮಾಡಲಾದ ರಸ್ತೆಯ ಉದ್ದದ ವಿವರಗಳು ಕೆಳಗಿನಂತಿವೆ:- (ರೂ.ಲಕ್ಷಗಳಲ್ಲಿ)

ಕ್ರ. ಸಂ.	ಆರ್ಥಿಕ ವರ್ಷ	ವಿಧಾನ ಸಭಾ ಕ್ಷೇತ್ರದ ಹೆಸರು	ಬಿಡುಗಡೆ ಮಾಡಲಾದ ಹಣ		ದುರಸ್ತಿ ಮತ್ತು ನಿರ್ವಹಣೆ ಮಾಡಲಾದ ಉದ್ದ (ಕಿ.ಮೀ ಗಳಲ್ಲಿ)		ಷರಾ
			ರಾಜ್ಯ ಹೆದ್ದಾರಿ	ಜಿ.ಮು. ರಸ್ತೆ	ರಾಜ್ಯ ಹೆದ್ದಾರಿ	ಜಿ.ಮು. ರಸ್ತೆ	
1	2	3	4	5	6	7	8
1	2008-09	ಭಾಲ್ಕಿ	7.70	64.70	26.84	50.07	
2	2009-10	ಭಾಲ್ಕಿ	45.85	34.71	91.72	72.77	
3	2010-11	ಭಾಲ್ಕಿ	50.60	82.65	50.42	96.10	

ಆ) ಪ್ರತಿ ವರ್ಷ ಬಿಡುಗಡೆಯಾದ ಅನುದಾನಕ್ಕೆ ತಕ್ಕಂತೆ ಭಾಲ್ಕಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ರಾಜ್ಯ ಹೆದ್ದಾರಿ ಹಾಗೂ ಜಿಲ್ಲಾ ಮುಖ್ಯ ರಸ್ತೆಗಳ ದುರಸ್ತಿ ಮತ್ತು ನಿರ್ವಹಣೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿರುತ್ತದೆ. ಸದರಿ ತಾಲ್ಲೂಕಿನಲ್ಲಿ ಭೂಮಿಯು ಕಪ್ಪು ಮಣ್ಣಿನ ಪ್ರದೇಶದಿಂದ ಕೂಡಿದ್ದು ನೀರಿನ ಜೌಗುವಿನಿಂದ ರಸ್ತೆಗಳು ಬೇಗನೆ ಹಾಳಾಗುತ್ತವೆ.

ಇ) ಭಾಲ್ಕಿ ತಾಲ್ಲೂಕಿನಲ್ಲಿ ಬರುವ ಬಹುತೇಕ ರಸ್ತೆಗಳು ಮಾಂಜ್ರಾ ಮತ್ತು ಕಾರಂಜಾ ನದಿಗಳ ಅಕ್ಕ-ಪಕ್ಕದ ಕಪ್ಪು ಮಣ್ಣಿನ ಭೂಮಿಯಲ್ಲಿ ಹಾಯ್ದು ಹೋಗುತ್ತಿರುವುದರಿಂದ ಹಾಗೂ ಅಧಿಕ ಭಾರದ ವಾಹನಗಳ ಸಂಚಾರದ ಸಾಂದ್ರತೆಯಿಂದ ರಸ್ತೆಗಳು ಹಾಳಾಗುತ್ತಿರುವುದು ನಿರ್ವಹಣೆ ಅನುದಾನದಲ್ಲಿ ಪೂರ್ಣ ಪ್ರಮಾಣದ ದುರಸ್ತಿ ಕೈಗೊಳ್ಳಲು ಸಾಧ್ಯವಾಗುವುದಿಲ್ಲ, ಪೂರ್ಣ ಪ್ರಮಾಣದಲ್ಲಿ ಹಾಳಾದ ರಾಜ್ಯ ಹೆದ್ದಾರಿ ರಸ್ತೆಯ ಭಾಗಗಳನ್ನು ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಸೇರ್ಪಡೆ ಮಾಡಲಾಗಿದ್ದು ಅನುಮೋದನೆ ದೊರೆತ ನಂತರ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು.